Sri M. V. KRISHNAPPA.—The enquiries are pending with the Assistant Commissioner; the final decision will be taken by the Deputy Commissioner.

Sri C. S. HULKOTI.—Is the Government aware that revenue is being collected from such lands?

Sri M. V. KRISHNAPPA.—It is wrong on the part of the Revenue Department to collect revenue from such lands. We will see that they do not do it hereafter.

ಶ್ರೀ ಸಿ. ಎಸ್. ಹುಲ್ಕೋಟಿ.—ಅಕ್ವಿಸಿಷನ್ ಕಾಂಪೇನ್ಸೇಷನ್ ಕೊಡುವತನಕ ಕ್ರಾಪ್ ಕಾಂಪೆನ್ಸೇಶನ್ ಕೊಡುವುದನ್ನು ಬಂದ್ ಮಾಡಿರುವುದಕ್ಕೆ ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದ್ ಮಾಡಿಲ್ಲ. ಕ್ರಾಪ್ ಕಾಂಪೆನ್ಸೇಷನ್ ಕೊಡಬೇಕೆಂದು ನಾವು ಎರಡು ವರ್ಷದಲ್ಲಿ ಏನು ರೂಲ್ಸ್ ಮಾಡಿದ್ದೆವೊ, ಅದು ಹಾಗೆಯೆ ಇದೆ, ಆ ಆಜ್ಞೆಯನ್ನು ವಾಪಸು ಪಡೆದಿಲ್ಲ. ಈ ಕೇಸಿನಲ್ಲಿ ಅಡ್‌ವಾನ್ಸ್ ಕಾಂಪೆನ್‌ಸೇಷನ್ 75 ಕೊಟ್ಟಿದೆ.

Soil Testing work by the Agricultural Department.

*Q.—172. Smt. B. L. SUBBAMMA (Chickmagalur).—

Will the Government be pleased to state:—

(a) the names of districts in Mysore State where the Agricultural Department has done Soil Testing;

(b) whether the required staff is appointed for this purpose;

(c) in which district the work of soil testing is going on at present?

A.—Sri H. C. BORAIAH (Parliamentary Secretary to Minister for Agriculture).—

(a) The Department has been doing soil testing work in respect of all the nineteen districts of the State.

(b) Yes.

(c) Soil testing work in respect of all the districts is going on at present.

9.30. A. M.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಉತ್ತರದಲ್ಲಿ ಎಲ್ಲ 19 ಜಿಲ್ಲೆಗಳಲ್ಲಿಯೂ ಮಣ್ಣಿನ ಪರೀಕ್ಷೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ದೇಶದ ಯಾವ ಯಾವ ಭಾಗದಲ್ಲಿ ಇಂತಹ ಪ್ರಯೋಗ ಕೇಂದ್ರಗಳನ್ನು ತೆರೆಯಲಾಗಿದೆ?

ಶ್ರೀ ಹೆಚ್. ಸಿ. ಬೋರಯ್ಯ (ವ್ಯವಸಾಯ ಶಾಖೆಯ ಸಂಸತ್ತಿನ ಕಾರ್ಯದರ್ಶಿ).—ಹೆಬ್ಬಾಳ್‌ನಲ್ಲಿ ಸರಕಾರದವರ ಒಂದು ಮಾದರಿ ಪ್ರಯೋಗ ಕೇಂದ್ರ ಇದೆ. ಇದೂ ಅಲ್ಲದೆ ಮೈಸೂರಿನಲ್ಲಿರುವ ವಾಣಿವಿಲಾಸ ಮೊಹಲ್ಲಾದಲ್ಲಿರುವ ಕಾಫೀ ಕ್ಯೂರಿಂಗ್ ವರ್ಕ್ಸ್‌ನವರು ಒಂದು ಪ್ರಯೋಗ ಕೇಂದ್ರವನ್ನು ನಡೆಸುತ್ತಿದ್ದಾರೆ. ಇನ್ನೊಂದು ಖಾಸಗಿಯಾಗಿ ಮಣಿಪಾಲ್‌ನಲ್ಲಿ ಕಸ್ತೂರಿ ಬಾ ಕೇಂದ್ರಕ್ಕೆ ಸೇರಿದಂತೆ ನಡೆಸುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಪ್ರಯೋಗ ಕೇಂದ್ರಗಳಿಗೆ ಬರುವ ಮಣ್ಣಿನ ಪರೀಕ್ಷೆ ಮಾಡಿ ಎಷ್ಟೆಷ್ಟು ಬೆಳೆ ಹೆಚ್ಚು ಮಾಡಬಹುದು ಎನ್ನುವುದಕ್ಕೆ ವ್ಯವಸಾಯ ಇಲಾಖೆಯವರು ರೈತರಿಗೆ ತಿಳಿಯುವಂತೆ ಏನಾದರೂ ಪ್ರಚಾರ ಕಾರ್ಯ ಮಾಡುತ್ತಿದ್ದಾರೆಯೇ?

ಶ್ರೀ ಹೆಚ್. ಸಿ. ಬೋರಯ್ಯ.—ಮಣ್ಣಿನ ಸ್ಯಾಂಪಲುಗಳನ್ನು ಇರಾಖೆಗೆ ಕಳುಹಿಸಿ ಕೊಟ್ಟನಂತರ ತಕ್ಷಣ ಅವರು ಅದನ್ನು ಪರೀಕ್ಷೆಮಾಡಿ ಅದರ ಮೇಲೆ ಸಲಹೆಗಳನ್ನು ಕೊಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪರೀಕ್ಷೆಗಾಗಿ ಕಳುಹಿಸಿರತಕ್ಕ ಮಣ್ಣನ್ನು ಇರಾಖೆಯವರು ಪರೀಕ್ಷೆಮಾಡಿ ಅದರ ರಿಸಲ್ಟುಗಳನ್ನು ಎಷ್ಟು ವರ್ಷಗಳಲ್ಲಿ ವಾಪಸು ಕಳುಹಿಸುತ್ತಾರೆ ?

ಶ್ರೀ ಹೆಚ್. ಸಿ. ಬೋರಯ್ಯ.—ಹಾಗೇನಿಲ್ಲ. ಜಾಗ್ರತೆಯಾಗಿಯೇ ಕಳುಹಿಸುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಜಾಗ್ರತೆಯಾಗಿ ಎಂದರೆ ಸುಮಾರು ಎಷ್ಟು ದಿವಸಗಳಲ್ಲಿ ಕಳುಹಿಸುತ್ತಾರೆ ?

ಶ್ರೀ ಎಚ್. ಸಿ. ಬೋರಯ್ಯ.—ಮಣ್ಣು ಬಂದ ಒಂದೆರಡು ತಿಂಗಳಲ್ಲೇ ಅದರ ರಿಸಲ್ಟನ್ನು ನೋಡಿ ವಾಪಸು ಕಳುಹಿಸುತ್ತಾರೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇರಾಖೆಯಲ್ಲಿ ಭೂಮಿಯ ಸಾರವನ್ನು ಟೆಸ್ಟು ಮಾಡಲು ಸ್ಪೆಷಲ್ ಸ್ಟಾಫ್‌ನನ್ನೇನಾದರೂ ನೇಮಕ ಮಾಡಿಕೊಂಡಿದ್ದೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಇದಕ್ಕಾಗಿ ಒಂದು ಸ್ಕೀಂ ಮಾಡಿರುವುದರಲ್ಲಿ ಸ್ಪೆಷಲ್‌ಸ್ಟಾಫ್ ಎಂದು ಕೆಲವರನ್ನು ನೇಮಕಮಾಡಿದ್ದೇವೆ. ತಮಗೆ ಬೇಕಾದರೆ ವಿವರವನ್ನೂ ತಿಳಿಸುತ್ತೇನೆ. ಕೆಮಿಸ್ಟ್ ಎಂದು ಒಬ್ಬರು ನೇಮಕವಾಗಿದ್ದಾರೆ. ರೀಸರ್ಚು ಅಸಿಸ್ಟೆಂಟ್ಸ್‌ರನ್ನು ನೇಮಕಮಾಡಿರಾಗಿದೆ. ಟೆಕ್ನಿಕಲ್ ಅಂಡ್ ಸೈಂಟಿಫಿಕ್ ಅಸಿಸ್ಟೆಂಟ್ಸ್ ಎಂದು ನೇಮಕಮಾಡಿರಾಗಿದೆ ಮತ್ತು ನಮಗೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ನೇಮಕವಾಗಿದೆ. ಇದರ ಡೀಟೇರ್ಸ್‌ಗಳು ಬೇಕಾದರೂ ಹೇಳುವುದಕ್ಕೆ ಸಾಧ್ಯವಿದೆ.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.-ಮಣಿಪಾಲ್‌ನಲ್ಲಿ ಸಾಯಿಲ್ ಟೆಸ್ಟಿಂಗು ಮಾಡುತ್ತಾರೆಂದು ಹೇಳಿದಿರಿ. ಅವರಿಗೇನಾದರೂ ಸರಕಾರದ ಕಡೆಯಿಂದ ಸಹಾಯಧನವನ್ನು ಕೊಡುತ್ತಿದ್ದೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಸಹಾಯಧನವನ್ನೇನೂ ಕೊಡುತ್ತಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಗ ಮಣ್ಣು ಪರೀಕ್ಷೆಮಾಡಿ ರೈತರಿಗೆ ಕಳುಹಿಸುತ್ತಿರುವುದರಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಆದುದರಿಂದ ಸರಕಾರ ಇದನ್ನು ಪುನಃ ಪರಿಶೀಲನೆ ಮಾಡಿ ರೈತರಿಗೆ ಅನುಕೂಲವಾಗುವ ಹಾಗೆ ತಕ್ಕ ಕಾರ್ಯಕ್ರಮಗಳನ್ನು ಅದಷ್ಟು ಜಾಗ್ರತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಸಿ. ಬೋರಯ್ಯ.—ಈಗ ಯಾರು ಯಾರು ಸರಕಾರದ ಕಡೆಗೆ ಮಣ್ಣನ್ನು ಪರೀಕ್ಷೆಗೆ ಕೊಟ್ಟು ಸಲಹೆಯಂತೆ ಪ್ರಯೋಗ ಮಾಡಿದ್ದಾರೋ ಅಂತಹ ಕಡೆಗಳಲ್ಲಿ ಬೆಳೆ ಶೇಕಡಾ 30 ರಷ್ಟು ಹೆಚ್ಚಾಗಿದೆ ಎಂದು ಸರಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವ್ಯವಸಾಯಗಾರರಿಗೆ ಅನುಕೂಲವಾಗುವಂತೆ ಮಣ್ಣನ್ನು ಪರೀಕ್ಷೆ ಮಾಡುವ ಕೇಂದ್ರಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಮಾಡಲು ಸರಕಾರ ಯೋಚನೆ ಮಾಡುತ್ತಾರೆಯೇ ?

ಶ್ರೀ ಹೆಚ್. ಸಿ. ಬೋರಯ್ಯ.—ಇದು ಸರಕಾರದ ತೀವ್ರ ಪರಿಶೀಲನೆಯಲ್ಲಿದೆ. ಅಲ್ಲದೆ ನಾಲ್ಕನೆ ಯೋಜನೆಯಲ್ಲಿ ಇಂತಹ ಕೇಂದ್ರಗಳನ್ನು ನಾಲ್ಕು ಜಿಲ್ಲೆಗಳಲ್ಲಿ ಪ್ರಾರಂಭಿಸಬೇಕು ಎನ್ನುವ ಉದ್ದೇಶ ಸರಕಾರಕ್ಕಿದೆ. ಈಗಾಗಲೇ ಮಂಗಳೂರಿನಲ್ಲಿ ಒಂದು ಮಾಡಬೇಕು ಎಂದಿದೆ. ಹಾಗೇ ಬಾಕಿ ಎಲ್ಲೆಲ್ಲಿ ನಾವು ರೈಸ್ ಕಲ್ಟಿವೇಷನ್‌ನನ್ನು ಇಂಟೆನ್ಸಿವ್ ಪ್ರೋಗ್ರಾಂ ಆಗಿ ಹಾಕಿಕೊಂಡಿದ್ದೇವೋ ಅಂತಹ ಜಿಲ್ಲೆಗಳಲ್ಲಿ ಇಂತಹ ಸಂಶೋಧನಾ ಕೇಂದ್ರಗಳನ್ನು ಮಾಡಬೇಕೆಂದು ಸರಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಒಂದು ವರ್ಷದಿಂದೀಚೆಗೆ ಸಾಯಿಲ್ ಟೆಸ್ಟಿಂಗ್ ಕೇಸಸ್ ಸರಕಾರಕ್ಕೆ ಎಷ್ಟು ಬಂದಿದ್ದವು, ಅವುಗಳಲ್ಲಿ ಎಷ್ಟು ಡಿಸ್‌ಪೋಸ್ ಮಾಡಿದ್ದಾರೆ ?

ಶ್ರೀ ಹೆಚ್. ಸಿ. ಬೋರಯ್ಯ.—ಎಷ್ಟು ಬಂದಿದೆ ಎನ್ನುವುದನ್ನು ಹೇಳಲು ನನಗೆ ನೋಟೀಸು ಬೇಕು. ಎಷ್ಟು ಪರೀಕ್ಷೆ ಮಾಡಿ ಕಳುಹಿಸಿದೆ ಎನ್ನುವುದಕ್ಕೆ 1964ನೇ ಇಸವಿಯಲ್ಲಿ ಮಾಡಿದುದದನ್ನು ತಮ್ಮ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ನಾವು 20,700 ಕೇಸುಗಳಲ್ಲಿ ಮಣ್ಣು ಪರೀಕ್ಷೆ ಮಾಡಿ ಅವರಿಗೆ ವಾಪಸು ಕಳುಹಿಸಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಪ್ರಶ್ನೆ ಇಲ್ಲಿ ಕೇಳಿರುವುದು ಮೈಸೂರು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ವ್ಯವಸಾಯ ಇರಾಖೆಯವರು ಮಣ್ಣಿನ ಪರೀಕ್ಷೆಯನ್ನು ನಡೆಸಿರುವರು ಎಂದು ಕೇಳಿರುವುದಕ್ಕೆ ಎಲ್ಲ ಜಿಲ್ಲೆಗಳಲ್ಲಿಯೂ ಪರೀಕ್ಷೆ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ. ಅದರೆ ಮೊನ್ನೆ ಇಲ್ಲಿ ಮಾನ್ಯ ವ್ಯವಸಾಯ ಮಂತ್ರಿಗಳಾದ ಶ್ರೀ ನಾರಾಯಣ ಗೌಡರು ಈ ಪ್ರಸಂಗದಲ್ಲಿ ಉತ್ತರ ಕೊಡುವಾಗ ನಾಲ್ಕನೇ ಯೋಜನೆಯಲ್ಲಿ ನಾಲ್ಕು ಕಡೆಗಳಲ್ಲಿ ಇಂತಹ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಇದೆ ಎಂದು ಹೇಳಿದರು, ಇದರಲ್ಲಿ ಯಾವುದು ಸರಿ ? ಅವರು ಹೇಳುವುದು ಸರಿಯೋ

ಅಥವಾ ಈಗ ಮಾನ್ಯ ಬೋರಯ್ಯನವರು ಹೇಳುವುದು ಸರಿಯೋ ? ಅಲ್ಲಹೆ ಖಾನಗಿ ಜನರು ಮಣ್ಣನ್ನು ಕಳುಹಿಸುವುದನ್ನು ಸರಕಾರಕ್ಕೆ ಕಳುಹಿಸುವಾಗ ಅದನ್ನು ಆಯಾ ಕೇಂದ್ರಗಳಲ್ಲೇ ಪರೀಕ್ಷೆ ಮಾಡುವಂತೆ ಮಾಡಲು ಎಲ್ಲ ಜಿರ್ಲಾ ಕೇಂದ್ರಗಳಲ್ಲೂ ಇಂತಹ ಮಣ್ಣಿನ ಸಂಶೋಧನಾ ಕೇಂದ್ರವನ್ನು ತೆರೆಯಲು ಇರಾಖೆಯವರು ಏನಾದರೂ ವ್ಯವಸ್ಥೆ ಮಾಡಿ ಕೊಂಡಿದ್ದಾರೋ ಹೇಗೆ ?

ಶ್ರೀ ಹೆಚ್. ಸಿ. ಬೋರಯ್ಯ.—ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಸಾಯಿಲ್ ಟೆಸ್ಟಿಂಗ್ ಮಾಡಿಸಲು ಆಯಾ ಬಿ. ಡಿ. ಓ ಗಳು ಇದ್ದಾರೆ. ಗ್ರಾಮಸೇವಕರು ಅಲ್ಲಿನ ರೈತರುಗಳಿಂದ ಮಣ್ಣನ್ನು ಪಡೆದುಕೊಂಡು ಅದನ್ನು ನಮ್ಮ ಸಂಶೋಧನೆ ಕೇಂದ್ರಗಳಿಂದ ಪರೀಕ್ಷೆಮಾಡಿಸಿ ಅನುಕೂಲಗಳನ್ನು ಮಾಡಿಕೊಡಿಸುತ್ತಾರೆ. ಇದಕ್ಕಾಗಿ 1965 ನೇ ಸೆಪ್ಟೆಂಬರು ತಿಂಗಳಲ್ಲೇ ಇಂತಹ ಒಂದು ಸಾಯಿಲ್ ಟೆಸ್ಟಿಂಗ್ ಸಂಶೋಧನಾ ಕೇಂದ್ರವನ್ನು ತುಂಗಭದ್ರ ಪ್ರದೇಶಕ್ಕೆ ಅನುಕೂಲವಾಗುವಂತೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ.

Shifting of Korlahalli Village in Mundargi Taluk.

*Q.—257. Sri C. S. HULKOTI (Mundargi).—

Will the Government be pleased to state :—

(*a*) whether it has come to the notice of the Government that the whole Village 'Korlahalli' in Mundargi Taluk in the District of Dharwar is being affected by the back water of Tungabhadra Dam near Hospet ;

(*b*) whether it is a fact that there was a proposal to shift the whole village to some other site by the Health Department, Revenue Department, Taluk Development Board and the general public of the village since 4-5 years back ;

(*c*) whether they are aware that the foodgrains stored in the pits of the village are damaged during the rainy season on account of the village being surrounded by water in rainy season ;

(*d*) whether they are aware that the village is also affected by Malaria in the rainy season ;

(*e*) at what stage, the shifting of the village matter is pending ?

A.—Sri S. NIJALINGAPPA (Chief Minister).—

(*a*) Yes.
(*b*) Yes.
(*c*) Yes.
(*d*) No ; it has been reported that sanitation of the village is affected adversely.
(*e*) The question of shifting the entire village is before the T. B. Board.

ಶ್ರೀ ಸಿ. ಎಸ್. ಹುಲ್ಕೋಟಿ.—ತುಂಗಭದ್ರಾ ಅಣೆಕಟ್ಟಿನ ಒತ್ತುವರಿ ನೀರಿನಿಂದಾಗಿ ಇಲ್ಲಿರುವ ಕೊರ್ಲಹಳ್ಳಿ ಗ್ರಾಮಕ್ಕೆ ಬಹಳವಾಗಿ ತೊಂದರೆಯಾಗುತ್ತಿರುವುದರಿಂದ ಇದನ್ನು ನರಿಪಡಿಸಲು ತುಂಗಭದ್ರಾ ಬೋರ್ಡಿನವರನ್ನು ಒತ್ತಾಯ ಮಾಡಲು ಸರಕಾರ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಾವು ಒತ್ತಾಯ ಮಾಡುತ್ತಲೇ ಬಂದಿದ್ದೇವೆ.